ಬೇಕಾದರೂ ಮಾತನಾಡಲಿ ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ನಾನು ಕಳಕಳಿಯಿಂದ ವಿನಂತಿಮಾಡಿಕೊಳ್ಳುವುದು ಇಷ್ಟೆ. ಒಂದೇ ವಿಚಾರವನ್ನು ಸುಮಾರು ಅರ್ಧ ಗಂಟೆಯಿಂದ ವಿಶ್ಲೇಷಣೆ ಮಾಡುತ್ತಿದ್ದೀರಿ. ತಾವು ಇನ್ನೂ ಅನೇಕ ವಿಚಾರಗಳ ಬಗ್ಗೆ ಮಾತನಾಡುವುದು ಇದೆ. ಅವುಗಳ ಬಗ್ಗೆ ಮಾತನಾಡಿ. ತಾವು ಇನ್ನು ಮುಂದಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ..

ಉಪಾಧ್ಯಕ್ಷಿಣಿಯವರು : ಮಾನ್ಯ ಯಡಿಯೂರಪ್ಪನವರೇ, ನೀವು 3.15 ಗಂಟೆಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದಿರಿ. ನೀವು ಮಾತನಾಡುವಾಗ ಗದ್ದಲಕ್ಕೆ ಅವಕಾಶ ಮಾಡಿಕೊಡಬೇಡಿ. ಇತರ ಸದಸ್ಯರೂ ಸಹಾ ಸದನದಲ್ಲಿ ಗದ್ದಲ ಮಾಡಬೇಡಿ. ಬೇರೆ ಸದಸ್ಯರುಗಳು ಮಾತನಾಡುವವರಿದ್ದಾರೆ. ಆದ್ದರಿಂದ ದಯವಿಟ್ಟು ಬೇಗ ಮುಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳು ನಮಗೆ ಸಲಹೆ ಕೊಟ್ಟಿದ್ದಾರೆ. ಸಮಯವನ್ನು ಎಷ್ಟೆಷ್ಟು, ಎಲ್ಲೆಲ್ಲಿ ಹೇಗೆ ಉಳಿತಾಯ ಮಾಡಬೇಕೆಂದು ನಮಗೆ ಹೇಳಿದರೆ ಅಷ್ಟು ಉಳಿತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಸಣ್ಣ ಉಳಿತಾಯ ಮಂತ್ರಿಗಳಿಂದ ಸಮಯದ ಹರಣವಾಗುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೇಳುವ ಹಾಗೂ ಕೇಳುವ ಸ್ವಾತಂತ್ರ್ಯ ಇಲ್ಲದಿದ್ದರೆ ಸದನವನ್ನು ಏತಕ್ಕೆ ನಡೆಸಬೇಕು ?

ಡಾ. ವೈ. ನಾಗಪ್ಪ .....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಕಾವೇರಿ ಜಲ ವಿವಾದವನ್ನು...

(ಗೊಂದಲ)

ಮನಸ್ಸಿಗೆ ಬಂದಂತೆ ಹುಚ್ಚಾಪಟ್ಟೆ ಮಾತನಾಡುವ ಪ್ರವೃತ್ತಿಯನ್ನು ನಿಲ್ಲಿಸಿ.

ಡಾ. ವೈ. ನಾಗಪ್ಪ : ಬುದ್ಧಿವಂತರೆನಿಸಿಕೊಂಡ ಜನರು ಮಾತನಾಡುವ ರೀತಿಯೇ ಇದು? 'ನೀನ್ಯಾರೋ ಕೇಳುವುದಕ್ಕೆ' ಎಂದರೆ ಏನರ್ಥ? ಮನ ಬಂದಂತೆ ಮಾತನಾಡುವುದಕ್ಕೋಸ್ಕರವೇ ಶಾಸನಸಭೆ ಕರೆಯುತ್ತಾರೆಯೇ?

ಒಬ್ಬ ಮಾನ್ಯ ಸದಸ್ಯರು : ಇದು ಸಂಸತ್ತಿನಲ್ಲಿರುವ ಜನರು ಮಾತನಾಡುವ ಭಾಷೆಯೇ?

(ಗೊಂದಲ)

(ಈ ಸಂದರ್ಭದಲ್ಲಿ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎ. ರುಕ್ಮಯ್ಯಪೂಜಾರಿ, ಶ್ರೀ ಆರ್.ವಿ. ದೇಶಪಾಂಡೆ, ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿ ಅವರು ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸದಸ್ಯರ ಹಕ್ಕನ್ನು ಮತ್ತು ಬಾಧ್ಯತೆಗಳನ್ನು ರಕ್ಷಣೆ ಮಾಡಬೇಕು. ತಮಗೂ ರಕ್ಷಣೆ ಮಾಡುವುದಕ್ಕೆ ಅವರು ಅವಕಾಶ